ಅ.ದಾ.47/2019 ಪಿಡಬ್ಲ್ಯೂ-1

ದಿನಾಂಕಃ 22.07.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಜಿ.ಬಿ.ವಿ. ವಕೀಲರಿಂದ:**

ನಿಪಿ-1 ನ್ನು ಬೆಂಗಳೂರಿನಲ್ಲಿ ಮಾಡಿಸಲಾಗಿದೆ. ಆ ಸಮಯಕ್ಕೆ ನಾನು ಹೋಗಿದ್ದೆ. ಆ ಜಿಪಿಎ ಗೆ ಯಾರು ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಜಿಪಿಎ ಗೆ ಯಾರು ಯಾರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಜಿಪಿಎ ಯಾವ ವಕೀಲರ ಬಳಿ ಯಾವ ದಿನಾಂಕದಂದು ಮಾಡಿಸಲಾಗಿದೆ ಎಂದು ನನಗೆ ನೆನಪಿಲ್ಲ. ಜಿಪಿಎ ಗಾಗಿ ಯಾರು ಯಾರ ಹೆಸರಿನಲ್ಲಿ ಹಾಳೇ ತೆಗೆದುಕೊಂಡು ಬಂದರು ನನಗೆ ಗೊತ್ತಿಲ್ಲ. ಜಿಪಿಎ ಬ್ಲ್ಯೂ ಪೇಪರ್ ನಲ್ಲಿ ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಪ್ರೆಸ್ಟೀಜ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದು, ಅವರು ಸಮಾರು 12-15 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾರೆ. ವಾದಿಯ ವಿಳಾಸ ಕಳಸ ಮತ್ತು ಬೆಂಗಳೂರು ಎರಡೂ ಕಡೆ ಇದೆ. ಪಕ್ಷಕಾರರು ವಾಸವಿರುವ ಅಥವಾ ಜಮೀನು ಹೊಂದಿರುವ ಸ್ಥಳದಲ್ಲಿ ಜಿಪಿಎ ಮಾಡಿಸಬೇಕು ಎಂದರೆ ಸರಿ.

ದಾವಾ ಸ್ವತ್ತು ವಾದಿಗೆ ಕ್ರಯದ ಮೂಲಕ ಬಂದಿದೆ. ಕ್ರಯಪತ್ರದ ಸಂಖ್ಯೆ ಮತ್ತು ದಿನಾಂಕ ನನಗೆ ಗೊತ್ತಿಲ್ಲ. ದಾವಾ ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ಮಾಹಿತಿ ಕೊಡುವಾಗ ಪಹಣಿ, ಜಿಪಿಎ ಮತ್ತು ಕ್ರಯಪತ್ರ ಕೊಟ್ಟಿದ್ದೇನೆ. ವಾದಿಗೆ ಸ.ನಂ.602/2 ರಲ್ಲಿ 12 ಗುಂಟೆ ಜಮೀನು ಇದೆ. ನಾನು ಐಟಿಐ ವಿದ್ಯಾಭ್ಯಾಸ ಮಾಡಿದ್ದೇನೆ. ಸ.ನಂ.602/2 ಕ್ಕೆ ಸಂಬಂಧಪಟ್ಟಂತೆ ವಾದಿ ನನಗೆ ಜಿಪಿಎ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-1 ಸ.ನಂ.602/1 ಕ್ಕೆ ಸಂಬಂಧಿಸಿದ್ದು ಎಂದರೆ ಸಾಕ್ಷಿಯು ತಾವು ಕನ್ಫ್ಯೂಜ್ ಆಗಿ ಸ.ನಂ.602/2 ಎಂದು ಹೇಳಿದ್ದು ಅದು ಸ.ನಂ.602/1 ಎಂದು ನುಡಿಯುತ್ತಾರೆ. ವಾದಿಗೆ ಸ.ನಂ.602/1 ರಲ್ಲಿ ಜಮೀನು ಹೊರತುಪಡಿಸಿ ಬೇರೆ ಜಮೀನು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಸ.ನಂ.602/2 ರಲ್ಲಿಯೂ ಜಮೀನು ಇದೆ ಎಂದು ನುಡಿಯುತ್ತಾರೆ. ಸ.ನಂ.602/2 ರಲ್ಲಿ ಎಷ್ಟು ವಿಸ್ತೀರ್ಣದ ಜಮೀನು ಇದೆ ಎಂದರೆ ಸಾಕ್ಷಿಯು ಮರೆತುಹೋಗಿದೆ ಎಂದು ನುಡಿಯುತ್ತಾರೆ.

ವಾದಿಯು ಇಲ್ಲದ ಸಮಯದಲ್ಲಿ ಅವರ ಜಮೀನಿನ ಕೆಲಸಗಳನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದರೆ ಸರಿ. ವಾದಿಗೆ ಮಾವಿನಕೆರೆ ಗ್ರಾಮದ ಸ.ನಂ.599, 602, 601 ರಲ್ಲಿ ಜಮೀನುಗಳು ಇದೆ. ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಗಮನಿಸಿದ್ದೇನೆ. ದಾವೆಯಲ್ಲಿ ಕೇಳಿರುವ ಪರಿಹಾರ ಸ.ನಂ.602/1 ರಲ್ಲಿರುವ 12 ಗುಂಟೆ ಜಮೀನಿಗೆ ಹೊರತುಪಡಿಸಿ ಬೇರೆ ಯಾವುದೇ ಜಮೀನಿಗೆ ಅಲ್ಲ ಎಂದರೆ ಸರಿ. ನಿಪಿ-6 ಮತ್ತು 8 ಒಂದೇ ಜಮೀನಿಗೆ ಸಂಬಂಧಪಟ್ಟ ಪಹಣಿ ಎಂದರೆ ಸರಿ. ಸದರಿ ಪಹಣಿಗಳ ಬಗ್ಗೆ ದಾವೆಯಲ್ಲಿ ಏನೂ ಹೇಳಿಲ್ಲ. ದಾವಾ ಜಮೀನಿಗೆ 100 ವರ್ಷಕ್ಕೂ ಹಳೇಯ ಬೇಲಿ ಇತ್ತು ಎನ್ನುವ ಬಗ್ಗೆ ನಾನು ಹಾಜರುಪಡಿಸಿರುವ ಕ್ರಯಪತ್ರದಲ್ಲಿ ನಮೂದು ಇದೆಯಾ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ

ಉತ್ತರ ದಿಕ್ಕಿಗೆ 100 ವರ್ಷ ಹಳೇಯ ಬೇಲಿ ಇತ್ತು. ಆ ಬೇಲಿ ಮುಳ್ಳಿನ ತಂತಿಬೇಲಿಯಾಗಿತ್ತು. ಈ ಬಗ್ಗೆ ತೋರಿಸಲು ಫೋಟೋ ಹಾಜರುಪಡಿಸಿಲ್ಲ. ಮೊದಲು ಬೇಲಿ ಇತ್ತು ಆನಂತರ ಹಗಳು ಇದೆ. ಹಗಳು ಎಂದರೆ ಸಮಾರು 2-3 ಅಡಿ ಅಗಲದ ಹಾಗೂ ಜಮೀನಿನ ವಿಸ್ತೀರ್ಣದ ಉದ್ದಕ್ಕೂ ಮಾಡುವ ಚರಂಡಿ ಎಂದರೆ ಸರಿ. ನಮ್ಮ ಜಮೀನಿಗೆ ಹಗಳು ಮಾಡಿದ ಮೇಲೆ ಆನಂತರದ ಜಮೀನಿನ ಒತ್ತುವರಿ ಮಾಡಲಾಗುವುದಿಲ್ಲ ಎಂದರೆ ಸರಿ.

ದಾವ ಜಮೀನಿಗೆ ಮಾಡಿದ್ದ ಹಗಳು ಈಗಲೂ ಹಾಗೇ ಇದೆ. ಈ ಬಗ್ಗೆ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಜಮೀನು ಮಂಜೂರಾತಿ ಸಮಯದಲ್ಲಿ ಬೇಲಿ ಮತ್ತು ಹಗಳನ್ನು ಪರಗಣನೆಗೆ ತೆಗೆದುಕೊಳ್ಳಲಾಗುವುದು ಎಂದರೆ ಸರಿ. ವಾದಿ ದಾವ ಜಮೀನನ್ನು ಫಾರಂ.53 ರ ಮಂಜೂರಾತಿ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅಕ್ರಮ ಮಂಜೂರಾತಿ ಪಡೆದಿರುವುದಾಗಿ ವಾದಿ ಹಾಗೂ ನನ್ನ ವಿರುದ್ಧ ಪ್ರಕರಣ ದಾಖಲಾಗಿದ್ದು ನನನ್ನು ಠಾಣೆಗೆ ಕರೆಯಿಸಿ ಹೇಳಿಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ಮಂಜೂರಾತಿಯನ್ನು ತಹಶೀಲ್ದಾರ್ ರವರ ಕಚೇರಿಯ ನಡಾವಳಿಗಳಂತೆ ವಜಾ ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾ ಜಮೀನಿನ ಸರ್ವೇ ನಂತರ ವಿಸ್ತೀರ್ಣ ಬದಲಾಗಿದೆ ಎಂದು ಹೇಳಿರುವ ಸಂಬಂಧ ಯಾವುದೇ ದಾಖಲೆ ಇಲ್ಲ. ಪ್ರತಿವಾದಿಯ ಜಮೀನನ್ನು ಪಡೆಯುವ ಉದ್ದೇಶದಿಂದ ದಾವಾ ಜಮೀನಿನ ವಿಸ್ತೀರ್ಣ ಬದಲಾಗಿದೆ ಎಂದು ಹೇಳಿದ್ದೇವೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.